**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ ೩೩೬/೨೦೧೩

ಸಿ.ಡಬ್ಲ್ಯೂ–೦೮ ಪಿ.ಡಬ್ಲ್ಯೂ-೦೬

| | | |
|---|---|---|
| ಹೆಸರು | ಃ | ವಿಜಯಕುಮಾರ |
| ತಂದೆಃಗಂಡ | ಃ | ರಾಮಣ್ಣಾ |
| ವಯಸ್ಸು | ಃ | ೪೦ ವರ್ಷ |
| ಉದ್ಯೋಗ | : | ಪಿ.ಐ. ಲೋಕಾಯುಕ್ತ |
| ವಾಸಸ್ಥಳ | ಃ | ಕೊಪ್ಪಳ |

ದಿನಾಂಕಃ೦೩.೦೪.೨೦೨೪

ಸತ್ಯ ಪ್ರತಿಜ್ಞೆಯ ಮೇರೆ ಗೆ

---

**ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ**

ನಾನು ೨೭.೧೦.೨೦೦೯ ರಿಂದ ೩೦.೦೪.೨೦೧೨ ವರೆಗೆ ಆಳಂದ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ: ೦೪.೦೮.೨೦೧೧ ರಂದು ೫.೩೦ ಗಂಟೆಗೆ ಚಾಸಾ-೧ ರವರು ಠಾಣೇಗೆ ಬಂದು ಲಿಖಿತ ಫಿರ್ಯಾದಿಯನ್ನು ಸಲ್ಲಿಸಿದ ಮೇರೆಗೆ ನಮ್ಮ ಠಾಣಾ ಗುನ್ನಾ ಸಂಖ್ಯೆ ೧೯೩/೨೦೧೧ ನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ-೧ ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಹಿಯನ್ನು ನಿಪಿ-೧(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವ.ದಲ್ಲಿರುವ ತನ್ನ ಸಹಿಯನ್ನು ನೊಡಿ ಗುರುತಿಸಿದ್ದರಿಂದ ಅದನ್ನು ನಿಪಿ-೨೮ ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-೨೮(ಎ) ಎಂದು ಗುರುತಿಸಲಾಯಿತು

ತನಿಖೆಯನ್ನು ಕೈಗೆತ್ತಿಕೊಂಡು ದಿ.೦೬.೦೮.೨೦೧೧ ರಂದು ಚಾಸಾ-೬ ರವರ ಹೇಳಿಕೆಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು, ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾಸಾ-೯ ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲು ಆರೋಪಿ ನಂ.೧ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ**

ಚಾಸಾ-೧ ರವರು ಖೊಟ್ಟಿ ಪಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅವರಿಗೆ ಸಹಾಯ ಮಾಡಲು ಖೊಟ್ಟಿಯಾಗಿ ತನಿಖೆ ಮಾಡಿ ಖೊಟ್ಟಿಯಾಗಿ ಪ್ರಕರಣ ದಾಖಲಿಸಿಕೊಂಡಿರುತ್ತೇನೆ ಎಂಧರೆ ಸರಿ ಅಲ್ಲ. ಚಾಸಾ-

೬ ರವರು ಈ ಪ್ರಕರಣದಲ್ಲಿ ಆದೇಶ ಮಾಡಿರುತ್ತಾರೆ, ಆದಕಾರಣದಿಂದ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾಸಾ-೬ ರವರಿಗೆ ಆರೋಪಿತರ ಮೇಲೆ ದ್ವೇಷ ಇತ್ತು ಆ ಕಾರಣಕ್ಕಾಗಿ ಚಾಸಾ-೧ ರವರ ಮೂಲಕ ಫಿರ್ಯಾದಿಯನ್ನು ಕೊಡಿಸಿರುತ್ತಾರೆ, ಆದ್ದರಿಂದ ಖೊಟ್ಟಿ ಪ್ರಕರಣ ದಾಖಲಿಸಿಕೊಂಡು ಖೊಟ್ಟಿಯಾಗಿ ತನಿಖೆ ಮಾಡಿ ಚಾಸಾ-೯ ರವರಿಗೆ ಮುಂದಿನ ತನಿಖೆಗಾಗಿ ಕಡತವನ್ನು ಹಸ್ತಾಂತರಿಸಿರುತ್ತೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲು ಆರೋಪಿ ನಂ.೨ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**

[ ಈ ಹಂತದಲ್ಲಿ ಆರೋಪಿ ನಂ.೧ ರವರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಆರೋಪಿ ನಂ.೨ ರವರ ಪರ ವಕೀಲರು ತಮ್ಮ ಪಾಟೀ ಸವಾಲೆಂದು ಅಳವಡಿಸಿಕೊಂಡಿರುತ್ತಾರೆ ]

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.